ವಂಥ ವಿಚಾರ ಬಹಳ ಮಹತ್ವವಾದುದ್ದು. ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯವೇ ಇಲ್ಲ. ಪ್ರಸ್ತುತ ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರು ಏನು ಸಲಹೆ ಕೊಟ್ಟಿದ್ದಾರೆ ಅದರಂತೆ ನಾವು ಈ ವಿಷಯವನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಕುಳಿತು ಮಾತನಾಡೋಣ.

ಶ್ರೀ ಎಂ. ವೀರಪ್ಪಮೊಯಿಲಿ.—ನಮಗೆ ಏನಾದರೊಂದು ಉತ್ತರ ಸರ್ಕಾರದಿಂದ ಈ ವಿಚಾರ ದಲ್ಲಿ ಬೇಕು. ವಿಷಯ ಎಷ್ಟೇ ಸೌಜನ್ಯತೆಯ ಪ್ರಶ್ನೆಯಾಗಿದ್ದರೂ ತಮ್ಮ ಸ್ಥಾನಕ್ಕೆ ಅದು ಘನತೆ ಮತ್ತು ಗೌರವಗಳ ಪ್ರಶ್ನೆಯನ್ನು ತರುವಂಥಾದ್ದಲ್ಲವೆಂದು ಅದನ್ನು ಇಲ್ಲಿ ವ್ಯವಹರಿಸುವುದು ಬೇಡವೆಂದು ಮತ್ತು ಅದನ್ನು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ವಿಚಾರ ಮಾಡೋಣವೆಂದು ಹೇಳಿದರೆ ಮುಂದಿನ ಕ್ರಮಕ್ಕೆ ನಾವು ನೋಟೀಸ್ ಕೊಡಬೇಕು ಎಂದರೆ ಕೊಡಬೇಕಾಗುತ್ತದೆ. ಇದರ ಬಗ್ಗೆ ತಾವು ಸದ್ಭಾವನೆಯನ್ನು ವ್ಯಕ್ತಮಾಡಿ ಏನನ್ನೂ ಹೇಳದಿದ್ದರೆ ಹೇಗೆ ?

ಅಧ್ಯಕ್ಷರು.—ಈಗ ತಾವು ಮತ್ತು ಹಿರಿಯ ಹಾಗೂ ಅನುಭವೀ ಸದಸ್ಯರಾದ ರಂಗನಾಥ್ ಅವರು ಪ್ರಸ್ತಾಪ ಮಾಡಿದ್ದಕ್ಕೆ ಮಾನ್ಯ ಬೊಮ್ಮಾಯಿಯವರು ಅದಕ್ಕೆ ಪೂರಕವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. ಮಾನ್ಯ ಬೊಮ್ಮಾಯಿಯವರು ಈ ವಿಷಯವನ್ನು ಚರ್ಚೆ ಮಾಡುವುದು ಬೇಡವೆಂದು ಹೇಳಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ವಿಷಯ ಇಲ್ಲಿ ಚರ್ಚೆ ಮಾಡುವ ವಸ್ತುವಾಗಬಾರದು. ಇದು ಚರ್ಚೆಯ ವಸ್ತುವಾಗುವುದಕ್ಕೆ ಅವಕಾಶವೂ ಇಲ್ಲ, ಅವಶ್ಯಕತೆಯೂ ಇಲ್ಲ. ನಾನು ಇದರ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುವಾಗ ಇದರ ಬಗ್ಗೆ ನನಗೆ ಅಧಿಕಾರ ಇದೆಯೆಂದು ತಿಳಿದು ನಿರ್ಣಯವನ್ನು ತೆಗೆದುಕೊಂಡಿದ್ದೇನೆ. ತಾವು ನನಗೆ ಇದರ ಬಗ್ಗೆ ಅಧಿಕಾರ ಇಲ್ಲವೆಂದು ವಾದ ಮಾಡುವುದು ತಮ್ಮ ನಿಲುವು ಆದರೆ, ಇದನ್ನು ಪ್ರಸ್ತಾಪ ಮಾಡುವುದಕ್ಕೆ ನೋಟೀಸ್ ಬೇಕು. ಈ ವಿಚಾರದ ಬಗ್ಗೆ ನನಗೆ ಸ್ಪಷ್ಟವಾದ, ನಿರ್ದಿಷ್ಟವಾದ, ನಿಖರವಾದ ಮತ್ತು ಶಾಸನಬದ್ಧವಾದ ಅಧಿಕಾರ ನನಗೆ ಇದೆ ಎಂದು ತಿಳಿದು ನಾನು ಸಮಿತಿಯನ್ನು ಮಾಡಿದ್ದೇನೆ. ಈ ವಿಚಾರದಲ್ಲಿ ಅನುಮಾನಕ್ಕೆ ಯಾವ ಎಡೆಯೂ ಇಲ್ಲ, ಅವಕಾಶವೂ ಇಲ್ಲ. ಆದ್ದರಿಂದ ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಈ ವಿಚಾರ ಮತ್ತೆ ಇಲ್ಲಿ ಚರ್ಚೆ ಮಾಡುವ ವಸ್ತುವಾಗಬಾರದು. ಈಗ ನಾವು ಮುಂದಿನ ಕಾರ್ಯಕ್ರಮಕ್ಕೆ ಹೋಗೋಣ.

ಶ್ರೀ ಕೆ. ಹೆಚ್. ರಂಗನಾಥ್.—ಆ ಸಮಿತಿಯು ಇವತ್ತಿನಿಂದಲೇ ಅಸ್ತಿತ್ವದಲ್ಲಿರಬಾರದು. ಏಕೆಂದರೆ ಇದು ಅಸ್ತಿತ್ವದಲ್ಲಿದ್ದರೆ ಚರ್ಚೆಯ ವಸ್ತುವಾಗುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ತಾವು ಇನ್ನೊಮ್ಮೆ ಯೋಚನೆ ಮಾಡಿ ಹೇಳಬೇಕು, ಇದು ಅಸ್ತಿತ್ವದಲ್ಲಿ ಉಳಿಯುತ್ತದೆಯೋ ಇಲ್ಲವೇ ?

ಅಧ್ಯಕ್ಷರು.—ಯೋಚನೆ ಮಾಡಿ ಪ್ರಸ್ತಾಪ ಮಾಡಿದ್ದೇನೆಂದು ಹೇಳಿದ್ದೇನೆ.

ಗಮನ ಸೆಳೆಯುವ ಸೂಚನೆಗಳು

ವಿಷಯ : ಸಕಲೇಶಪುರದ ಹತ್ತಿರ ಇರುವ ಬಾಳ್ಳು ಪೇಟೆಯ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಸಕಲೇಶಪುರದ ಹತ್ತಿರ ಇರುವ ಬಾಳ್ಳು ಪೇಟೆಯ ಹರಿಜನರ ಮೇಲೆ ನಡೆದ ದೌರ್ಜನ್ಯದ ಬಗ್ಗೆ ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಸಿ. ಜಿಗಜಿನಗಿ (ರಾಜ್ಯ ಗೃಹಮಂತ್ರಿ).—ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೋಕಿನಲ್ಲಿ ಬಾಳ್ಳು ಪೇಟೆಯು ಒಂದು ಹಳ್ಳಿಯಾಗಿದೆ. ಈ ಹಳ್ಳಿಯ ಜನಸಂಖ್ಯೆ ಸುಮಾರು 2943. ಹರಿಜನರ ಸಂಖ್ಯೆ 955, ಲಿಂಗಾಯಿತರ ಸಂಖೆ 1724- ಬ್ರಾಹ್ಮಣರು, ಮುಸಲ್ಮಾನರು, ಕ್ರಿಶ್ಚಿಯನ್ನರು ಮತ್ತು ಗೌಡರು ಇತ್ಯಾದಿಗಳು ಸುಮಾರು 264 ಇದ್ದಾರೆ.

2 ಈ ಹಳ್ಳಿಯಲ್ಲಿ 1-3-1983 ಮತ್ತು 20-5-1983ರ ಅವಧಿಯಲ್ಲಿ ಬೇರೆ ಬೇರೆ ಕಾರಣಗಳಿಂದ ಹರಿಜನರ ಮತ್ತು ಇತರ ಹಿಂದುಗಳ ನಡುವೆ ಕಲಹಗಳು ನಡೆದಿವೆ. ನಮ್ಮ ಸಮಾಜದಲ್ಲಿ ಆಳವಾಗಿ ಬೇರೂರಿರುವ ಸಾಮಾಜಿಕ ಹಾಗೂ ಆರ್ಥಿಕ ಅಸಮತೆ ಹಾಗೂ ಹರಿಜನರ ಬಗ್ಗೆ ತಾರತಮ್ಯ ಇದಕ್ಕೆ ಮೂಲಕಾರಣ.

3. ದಿನಾಂಕ 19-5-1983ರಂದು ಕೆಲವು ಹರಿಜನ ಯುವಕರು ಒಬ್ಬ ಹರಿಜನೇತರ ಮೋಟಾರು ಚಾಲಕನನ್ನು ಹರಿಜನ ಕಾಲೋನಿಯ ಮೂಲಕ ಬರುತ್ತಿದ್ದಾಗ ಹೊಡೆದರು. ಈ ವಿಷಯದಲ್ಲಿ ಸಕಲೇಶಪುರ ಗ್ರಾಮೀಣ ಪೋಲಿಸ್‌ಠಾಣೆಯಲ್ಲಿ ಗುನ್ನೆ ನಂ 95-83 ಭಾರತೀಯ ದಂಡ ಸಂಹಿತೆ 143, 341, 323 ಮತ್ತು 34 ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಿಕೊಳ್ಳಲಾಗಿದೆ ಮತ್ತು ತನಿಖೆ ಮುಂದುವರಿಯುತ್ತಿದೆ.

4. ದಿನಾಂಕ 20-5-1983ರಂದ ಬಾಳ್ಳುಪೇಟೆಯ ಹರಿಜನ ಕಾಲೋನಿಯ ಸಿದ್ದಯ್ಯ ಎಂಬು

ವರು ಸಕಲೇಶಪುರಕ್ಕೆ ಹೋಗುತ್ತಿದ್ದ ಸರ್ಕಾರಿ ಬಸ್ಸಿನಲ್ಲಿ ಮಧ್ಯಾಹ್ನ ಪ್ರಯಾಣ ಮಾಡುತ್ತಿದ್ದರು. ಅವರು ಕುಂಬಾರ ಕಟ್ಟೆಯ ಹಳ್ಳಿಯ ಹತ್ತಿರ ಬಸ್ಸಿನಿಂದ ಇಳಿಯಬೇಕಾದರೆ ಅವರ ಮೇಲೆ ದ್ವೇಷ ವನ್ನು ಹೊಂದಿದ್ದ ಕೆಲವು ಮೇಲ್ಜಾತಿಯ ಹಿಂದುಗಳು ಅವರಿಗೆ ಕುಡುಗೋಲಿನಿಂದ ಹೊಡೆದು ಮುಖಕ್ಕೆ ಗಾಯಗೊಳಿಸಿದರು. ಸಿದ್ದಯ್ಯನವರನ್ನು ಕೂಡಲೇ ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ತದನಂತರ ಅವರನ್ನು ಹಾಸನದ ಸರ್ಕಾರಿ ಆಸ್ಪತ್ರೆಗೆ ವರ್ಗಾಯಿಸಿ ಚಿಕಿತ್ಸೆ ನೀಡಲಾಯಿತು. ಶ್ರೀ ಸಿದ್ದಯ್ಯನವರ ದೂರಿನ ಮೇಲೆ ಸಕಲೇಶಪುರ ಗ್ರಾಮೀಣ ಪೋಲೀಸ್ ಠಾಣೆಯಲ್ಲಿ ಗುನ್ನೆ ನಂ. 97–83 ಭಾರತೀಯ ದಂಡ ಸಂಹಿತೆ ಕಲಂ 307ರ ಪ್ರಕಾರ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ ಮತ್ತು ತನಿಖೆ ಕೈಗೊಳ್ಳಲಾಗಿದೆ. ಈ ಘಟ ನೆಯ ಪರಿಣಾಮವಾಗಿ ಶ್ರೀ ಸಿದ್ದಯ್ಯನವರ ಮೂಗು ಮತ್ತು ಬಾಯಿಯ ಹತ್ತಿರ ಗಾಯಗಳುಂಟಾಗಿವೆ ಮತ್ತು ಇವರ ಬಲಗಾಲಿನ ಮೂಳೆಯು ಮುರಿದಿದೆ. 12 ಹರಿಜನರನ್ನು ಮತ್ತು 12 ಹಿಂದುಗಳನ್ನು ದಸ್ತಗಿರಿ ಮಾಡಲಾಯಿತು. ಇದು ಅಲ್ಲದೆ ಸಿ.ಆರ್.ಪಿ.ಸಿ. ಕಲಂ 107ರ ಪ್ರಕಾರ ಅವರ ಮೇಲೆ ಕಾರ್ಯಾಚರಣೆ ಮಾಡಲಾಗುತ್ತಿದೆ.

5. ಹರಿಜನರ ಮತ್ತು ಇತರರ ನಡುವೆ ನಡೆದ ಪರಸ್ಪರ ಘರ್ಷಣೆಗಳಿಗೆ ಸಂಬಂಧಪಟ್ಟಂತೆ ಹಲವಾರು ಮೊಕದ್ದಮೆಗಳನ್ನು ಅನೇಕರ ಮೇಲೆ ನೊಂದಾಯಿಸಲಾಗಿದೆ. 2 ಗುಂಪುಗಳ ಜನರ ಮೇಲೂ ಸಿ.ಆರ್.ಪಿ.ಸಿ. ಕಲಂ 107ರ ಪ್ರಕಾರ ಪ್ರತಿಬಂಧಕ ಕಾರ್ಯಾಚರಣೆ ಜರುಗಿಸಲಾಗಿದೆ.

6. ನಾನು ಬಾಳ್ಳುಪೇಟೆಗೆ ಭೇಟಿ ಇತ್ತು ಪರಿಸ್ಥಿತಿಯನ್ನು ಪರಿಶೀಲಿಸಿದ್ದೇನೆ. ಎರಡು ಪಂಗಡ ದವರ ಪ್ರತಿನಿಧಿಗಳನ್ನು ಒಳಗೊಂಡ ಒಂದು ಶಾಂತಿ ಸಮಿತಿಯನ್ನು ರಚಿಸಲಾಗಿದೆ. ಹರಿಜನರು ಮತ್ತು ಇತರರು ತಮ್ಮಲ್ಲಿಯ ಭಿನ್ನಾಭಿಪ್ರಾಯಗಳನ್ನು ಮರೆತು ಪರಸ್ಪರ ಸಹಕಾರ ಮತ್ತು ಸೌಹಾರ್ದತೆಯಿಂದ ಶಾಂತಿಯುತವಾಗಿ ಬಾಳಲು ಒಪ್ಪಿದ್ದಾರೆ.

7. ಹರಿಜನರು ಒಳಗಾಗಿರುವ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ಬಗ್ಗೆ ಸರ್ಕಾರಕ್ಕೆ ಪೂರ್ಣ ಅರಿವು ಇದೆ. ಅವರ ಸಮಗ್ರ ಏಳ್ಗೆಗಾಗಿ ಸಾಧ್ಯವಾದುದೆಲ್ಲವನ್ನೂ ಸರ್ಕಾರವು ಮಾಡುತ್ತಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಹೇಳಿಕೆಯನ್ನು ಕೊಟ್ಟಮೇಲೆ ಕೆಲವು ಪ್ರಶ್ನೆಗಳು ಇಲ್ಲಿ ಉದ್ಭವವಾಗಿದೆ. ಅವರ ಹೇಳಿಕೆಯ ಪ್ರಕಾರ ಮಾರ್ಚ್ 1, 1983 ರಿಂದ 20–5–1983ರ ವರೆಗೆ, ಇದರ ಮಧ್ಯದಲ್ಲಿ ಕೆಲವು ಘಟನೆಗಳು ಅಲ್ಲಿ ನಡೆದಿವೆ. ಮಾನ್ಯ ಸಚಿವರು ಬಹುಶಃ 22–6–1983ರಂದು ಅಲ್ಲಿಗೆ ಭೇಟಿ ಕೊಟ್ಟಿದ್ದಾರೆ. ಆದ್ದರಿಂದ 1–3–1983 ರಿಂದ 22–6–1983ರವರೆಗೆ, ಅಂದರೆ, ಸುಮಾರು 80 ದಿವಸಗಳ ಕಾಲ ಆ ಸ್ಥಳದಲ್ಲಿ ಕಲಹ, ಕ್ಲೇಶ ಮತ್ತು ಅಶಾಂತಿ ಹಬ್ಬಿತ್ತು ಎಂದಾಯಿತು. ಈಗ ಒಂದನೇ ಪ್ರಶ್ನೆ ಏನೆಂದರೆ, ಇಷ್ಟು ದಿವಸಗಳ ಕಾಲ ಇದನ್ನು ಮುಂದುವರಿಸಲಿಕ್ಕೆ ಕಾರಣವೇನು ? ಸರ್ಕಾರದವರಾಗಲಿ ಅಥವಾ ಡೆಪ್ಯುಟಿ ಕಮಿಷನರಾಗಲಿ ಶಾಂತಿ ಸಮಿತಿಯನ್ನು ಯಾವಾಗ ಮಾಡಿದಿರಿ ? ಅನಂತರ ಸಿ. ಆರ್. ಪಿ. ಸಿ 144ನೇ ಕಲಂ ಪ್ರಕಾರ ಅಲ್ಲಿ ಪ್ರತಿಬಂಧಕಾಜ್ಞೆಯನ್ನು ಯಾವಾಗ ಹಾಕಿದಿರಿ, ಪ್ರತಿಬಂಧಕಾಜ್ಞೆ ಹಾಕಿದ ಮೇಲೆ ಎಷ್ಟು ಘಟನೆ ಗಳು ನಡೆಯಿತು ? ತಮ್ಮ ಹೇಳಿಕೆಯಲ್ಲಿ ಹೇಳಿರುವಾಗ, ಬಸ್ಸಿನಲ್ಲಿ ಹೋಗುವಾಗ ಸಿದ್ದಯ್ಯನವರಿಗೆ ಏನು ತೀವ್ರವಾದ ಹೊಡೆತ ಆಯಿತು. ಆದು ಪ್ರತಿಬಂಧಕಾಜ್ಞೆ ಆದ ಮೇಲೆ ಆಯಿತೇ ಅಥವಾ ಅದಕ್ಕಿಂತ ಮೊದಲು ಆಯಿತೆ ? ಇನ್ನು ಸಿದ್ದಯ್ಯನವರನ್ನು ಹೊಡೆದಂಥ ಸಂದರ್ಭವನ್ನು ತಮ್ಮ ಹೇಳಿಕೆಯಲ್ಲಿ ಹೇಳುವಾಗ ಕೆಲವು ಶಬ್ದಗಳನ್ನು ಹಾಕಿದ್ದೀರಿ. ಏನೆಂದರೆ, "ಅವರ ಮೇಲೆ ದ್ವೇಷವನ್ನು ಹೊಂದಿದ್ದ ಕೆಲವು ಮೇಲ್ಜಾತಿಯ ಹಿಂದುಗಳು ಅವರಿಗೆ ಕುಡುಗೋಲಿನಿಂದ ಹೊಡೆದು ಮುಖಕ್ಕೆ ಗಾಯಗೊಳಿಸಿ ದರು" ಎಂದು ಹೇಳಿದ್ದೀರಿ. ನನಗೆ ತಿಳಿದ ಪ್ರಕಾರ ಇದು ಸತ್ಯಕ್ಕೆ ದೂರವಾದುದು ಕಮ್ಯುನಲ್ ಕ್ಲಾಸ್ ಯಾವಾಗ ಆಯಿತು ? You are telling about a particular individual. You are taking out this incidents from the particular root cause. ಇದು ಸತ್ಯಕ್ಕೆ ದೂರವಾದ ಮಾತು ಎಂದು ನಾನು ಹೇಳುತ್ತಾ ಇದ್ದೇನೆ. 90 ದಿವಸಗಳ ಕಾಲ ಈ ಘಟನೆ ಏನು ನಡೆದಿದೆ, ಇದರ ಬಗ್ಗೆ ಮಾನ್ಯ ಮಂತ್ರಿಗಳು ಹೇಳುವಾಗ "ದ್ವೇಷದಿಂದ" ಎಂಬ ಮಾತನ್ನು ಏನು ಹೇಳಿದ್ದಾರೆ, ಇದು ಇಡೀ ಕೇಸಿಗೆ ಬಾಧಕವಾದಂಥ ವಿಚಾರವಾಗುವುದಿಲ್ಲವೇ ? ಈ ಪದವನ್ನು ಸರಿಯಾಗಿ ವಿಮರ್ಶೆಮಾಡಿ ಹಾಕಿದ್ದಾರೆಯೇ ? ತಮಗೆ ಯಾರು ಮಾಹಿತಿ ಕೊಟ್ಟಿದ್ದಾರೆ. ಅದನ್ನು ವಿಮರ್ಶೆ ಮಾಡಿ ಹಾಕಿದ್ದೀರಾ ?

ಇನ್ನು 90 ದಿವಸಗಳ ಕಾಲ ಇಷ್ಟು ಘಟನೆ ನಡೆದಿದ್ದರೂ ಕೂಡ ಸೋಷಿಯಲ್ ಬಾಯ್ಕಾಟ್ ಇತ್ತು. ಈ ವಿಚಾರವನ್ನು ತಾವು ತಮ್ಮ ಹೇಳಿಕೆಯಲ್ಲಿ ಕಾಣಿಸಲಿಲ್ಲ. 90 ದಿವಸಗಳ ಕಾಲ ಅವರು ಯಾವುದೇ ಒಂದು ಅಂಗಡಿಗೆ ಹೋಗಲಾರದೆ ಮತ್ತು ಯಾವುದೇ ಕಾರ್ಯಕ್ರಮಗಳಿಗೆ ಹೋಗದೆ ಸೋಷಿಯಲ್ ಬಾಯ್ಕಾಟ್ ಮಾಡಿಕೊಂಡು ಇದ್ದರು. ಆಗ ತಾವು ಏನು ಸಹಾಯ ಅವರಿಗೆ ಒದಗಿಸಿದಿರಿ. ನಾನು ತಿಳಿದುಕೊಂಡಂಥ ವರ್ತಮಾನದ ಪ್ರಕಾರ, 90 ದಿವಸಗಳ ಕಾಲ ಅವರು ಕೆಲವು ಸೊಪ್ಪುಗಳನ್ನು

ತಿಂದುಕೊಂಡು ಜೀವನ ಮಾಡಿದ್ದಾರೆ, ಕೊನೇ ಘಳಿಗೆಯಲ್ಲಿ ಅವರಿಗೆ ರೇಷನ್ ಕೊಟ್ಟಿದ್ದೀರಿ. ಈ ಮಧ್ಯದಲ್ಲಿ ಅನೇಕರಿಗೆ ಹೊಡೆದಿದ್ದಾರೆ. ಲಕ್ಷ್ಮಣ ಎಂಬ ಒಬ್ಬ ಹರಿಜನರಿಗೆ ನೀರು ತೆಗೆಯುವಾಗ ಹೊಡೆದಿದ್ದಾರೆ. ಆ ಘಟನೆಯ ವಿಷಯ ತಮ್ಮ ಹೇಳಿಕೆಯಲ್ಲಿ ಕಾಣುತ್ತಾ ಇಲ್ಲ. ಮತ್ತೆ ಶಾಂತಿ ಸಮಿತಿಯನ್ನು ತಕ್ಷಣ ಏಕೆ ಮಾಡಲಿಲ್ಲ ? ಇಷ್ಟು ನಿಧಾನವಾಗಿ ಏಕೆ ಮಾಡಿದಿರಿ ? ಇಷ್ಟು ವಿಚಾರಗಳಿಗೆ ಮಾಹಿತಿಯನ್ನು ಒದಗಿಸಿಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖೇನ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿಗಿ ಜಿನಗಿ ರಮೇಶ್ ಚಂದಪ್ಪ.—ಮಾನ್ಯ ಅಧ್ಯಕ್ಷರೇ, ಬಾಳ್ಳುಪೇಟೆಯಲ್ಲಿ ಗಲಾಟೆ ನಡೆದಿರುವುದಕ್ಕೆ ಕಾರಣವೇನೆಂಬುದನ್ನು ನಾನು ಈಗಾಗಲೇ ಒಂದು ಹೇಳಿಕೆಯಲ್ಲಿ ಹೇಳಿದ್ದೇನೆ. ಆದರೆ ಇದಕ್ಕೆ ಸಮಾಜದಲ್ಲಿರತಕ್ಕ ಸಾಮಾಜಿಕ ಮತ್ತು ಆರ್ಥಿಕ ವಿಷಮತೆಯೇ ಕಾರಣವೆಂದು ನಾನು ಸ್ಪಷ್ಟವಾಗಿ ಹೇಳುತ್ತಾ ಇದ್ದೇನೆ ಮತ್ತೆ 90 ದಿನಗಳ ಅವಧಿಯಲ್ಲಿ ಹರಿಜನರಿಗೇ ಆಗಲಿ ಅಥವಾ ಇನ್ನಿತರ ಬೇರೆಯವರಿಗೇ ಆಗಲಿ ಅಷ್ಟೊಂದು ತೀವ್ರತರವಾದ ಯಾವ ತೊಂದರೆಗಳೂ ಆಗಿಲ್ಲವೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತಾ ಇದ್ದೇನೆ. ಈ 90 ದಿವಸಗಳ ಅವಧಿಯಲ್ಲಿ ಜನತೆಗೆ ಯಾವ ಒಂದು ಸಾಮಾಜಿಕ ರಕ್ಷಣೆ ಕೊಡಬೇಕೋ ಆ ಎಲ್ಲಾ ರಕ್ಷಣೆಗಳನ್ನೂ ಸರ್ಕಾರ ಒದಗಿಸಿದೆ. ಆದರೆ ಅವರು ಸಾಮಾಜಿಕ ಬಹಿಷ್ಕಾರ ಹಾಕಿದರು ಎಂದು ಹೇಳುತ್ತಾ ಇದ್ದಾರೆ, ಆದರೆ ಅಲ್ಲಿ ಸಾಮಾಜಿಕ ಬಹಿಷ್ಕಾರ ಯಾವುದೂ ಹಾಕಿರಲಿಲ್ಲ. ಗಲಾಟೆ ಆದ ತಕ್ಷಣ ಡೆಪ್ಯುಟಿ ಕಮೀಷನರು ಹರಿಜನರ ಕಾಲೋನಿಯಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಅಲ್ಲಿನ ಜನತೆಗೆ ಬೇಕಾದ ಎಲ್ಲಾ ಸೌಕರ್ಯಗಳನ್ನೂ ಒದಗಿಸಿಕೊಟ್ಟಿದ್ದಾರೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ಜಿ. ಡಿ. ಸೋಮಪ್ಪ.—ನಾನು ಆ ಕ್ಷೇತ್ರದ ಶಾಸಕನಾದ್ದರಿಂದ ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು.—ಹೊಸ ನಿಯಮಗಳ ಪ್ರಕಾರ ಸಹಿ ಹಾಕದೇ ಹೋದರೆ ಮಾತನಾಡಲಿಕ್ಕೆ ಬರುವುದಿಲ್ಲ.

ಶ್ರೀ ಜಿ. ಡಿ. ಸೋಮಪ್ಪ.—ಇವತ್ತು ಹರಿಜನರ ಕಗ್ಗೊಲೆ ಆಗಿರತಕ್ಕಂಥಾದ್ದು. ಮಾನ್ಯ ಮಂತ್ರಿಗಳು ಜೂನ್ ತಿಂಗಳಲ್ಲಿ ಅಲ್ಲಿಗೆ ಹೋಗಿದ್ದಾರೆ, ಶಾಸಕರಿಗೆ ಒಂದು ನೋಟೀಸ್ ಕೊಟ್ಟಿಲ್ಲ. ಶಾಸಕರಿಗೆ ತಿಳಿಸದೆ ಬೇರೆಯವರನ್ನು ಕರೆದುಕೊಂಡು ಹೋಗಿದ್ದಾರೆ. ಇವತ್ತು ಹರಿಜನರನ್ನು ಕಗ್ಗೊಲೆ ಮಾಡುವುದಕ್ಕೆ ಅವಕಾಶಕೊಡುವುದಿಲ್ಲ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ತಾವು ನೋಟೀಸ್ ಕೊಟ್ಟಿಲ್ಲ, ಸಹಿ ಹಾಕಿಲ್ಲ. ಆದ್ದರಿಂದ ಮಾತನಾಡಲಿಕ್ಕೆ ಬರುವುದಿಲ್ಲ.

ಶ್ರೀ ಜಿ. ಡಿ. ಸೋಮಪ್ಪ.—ನಾನು ಹಿಂದೆ ಅಧಿವೇಶನ ನಡೆಯುತ್ತಿದ್ದಾಗಲೇ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ಇವತ್ತು ಈ ಕಾಲ್ ಅಟೆನ್‌ಷನ್ ಬಂದಿದೆ. ತಾವು ಹಳೆಯ ಸದಸ್ಯರು, ಈ ರೀತಿ ಧ್ವನಿ ಏರಿಸಿ ಮಾತನಾಡಿದರೆ ಶಾಸಕಾಂಗದ ವ್ಯಾಪ್ತಿಗೆ ಬರುವುದಿಲ್ಲ. ಹೀಗೆ ವಿವರಿಸುತ್ತಾ ಹೋದರೆ ಕೆಲಸಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಜಿ. ಡಿ. ಸೋಮಪ್ಪ.—ನಾನು ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು.—ತಾವು ನೋಟೀಸಿಗೆ ಸಹಿ ಹಾಕದೇಹೋದರೆ ಹೊಸ ನಿಯಮಗಳ ಪ್ರಕಾರ ಮಾತನಾಡಲಿಕ್ಕೆ ಬರುವುದಿಲ್ಲ. ತಮ್ಮ ನಾಯಕರು ಸಮರ್ಥರಿದ್ದಾರೆ, ಅವರು ಸಮರ್ಥನೆ ಮಾಡುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಸನ್ಮಾನ್ಯ ಸಚಿವರು ಹೇಳುತ್ತಾ, ಅಲ್ಲಿ ಡೆಪ್ಯುಟಿ ಕಮಿಷನರ್‌ರವರು ನ್ಯಾಯಬೆಲೆ ಅಂಗಡಿಗಳನ್ನು ತೆರೆದು ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಟ್ಟಿದ್ದಾರೆ, ಅಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿರಲಿಲ್ಲ ಎಂದು ಹೇಳಿದರು. ಅವರ ಅರ್ಥವೇನು ? ಸಾಮಾಜಿಕ ಬಹಿಷ್ಕಾರ ಹಾಕದೇ ಹೋದರೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕಾದ ಅವಶ್ಯಕತೆ ಏನಿತ್ತು ? ಆದುದರಿಂದ ಇದು ಒಂದಕ್ಕೊಂದು ತದ್ವಿರುದ್ಧವಾಗಿದೆ. ಸತ್ಯವನ್ನು ಮರೆಮಾಚತಕ್ಕ ಪ್ರಯತ್ನ ಮಾಡಬಾರದು. ಅಲ್ಲಿ ಈ ಘಟನೆಯಾದ ಮೇಲೆ ಶಾಂತಿ ಸಮಿತಿ ಆಗಿದೆ. ಅಲ್ಲಿ ಈಗ ಪರಿಸ್ಥಿತಿ ಹತೋಟಿಗೆ ಬಂದಿದೆ. ಅದನ್ನು ಮೆಚ್ಚಬೇಕು. ಆದರೆ ಈ 90 ದಿವಸಗಳಲ್ಲಿ ಸನ್ಮಾನ್ಯ ಸಚಿವರು ಅಲ್ಲಿಗೆ ಹೋಗದೆ ಶಾಂತಿಸಮಿತಿಯನ್ನು ಮಾಡದೆ ಪರಸ್ಪರ ಗುದ್ದಾಟ ಮಾಡತಕ್ಕ ಪ್ರಯತ್ನ ನಡೆದು ಅಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಲಾಯಿತು. ಇದು ವಾಸ್ತವಾಂಶ. ತಾವೂ ಕೂಡ ಅಲ್ಲಿಗೆ ಭೇಟಿ ಕೊಟ್ಟಿದ್ದೀರಿ. ಇದರಲ್ಲಿ ಸತ್ಯವನ್ನು ಮರೆಮಾಚತಕ್ಕ ಅವಶ್ಯಕತೆಯಿಲ್ಲ. ತಾವು ನಾನೂ ಕೂಡ ಹೋಗಿದ್ದೆ, ಶಾಂತಿ ಸಮಿತಿ ಮಾಡಿದೆ, ಸಮಾಧಾನಕ್ಕೆ ಬಂದಿದೆ ಎಂದು ಹೇಳಿದಿರಿ. We are not mixing up this mater. ಆದರೆ ಸತ್ಯ ಏನಿದೆ ಅದನ್ನು ಹೇಳಬೇಕು. 90 ದಿವಸಗಳ ಕಾಲ ಗಲಾಟೆ ನಡೆದದ್ದು ಹೌದು ಎಂದು ತಮ್ಮ ಹೇಳಿಕೆಯಲ್ಲಿ ಹೇಳಿದ್ದೀರಿ. ಆ ಸಂದರ್ಭದಲ್ಲಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಬೇಕಾದ ಪ್ರಸಂಗ ಏಕೆ ಬಂತು ಅಂದರೆ ಅಲ್ಲಿ ಸಾಮಾಜಿಕ ಬಹಿಷಾರ ಇತ್ತು. 90 ದಿವಸಗಳ ಕಾಲ ಅವರು ಕಷ್ಟವನ್ನು ಅನುಭವಿಸಿದ್ದಾರೆ. 144ನೇ ಸೆಕ್ಷನ್‌ನನ್ನು ಜಾರಿ ಮಾಡಿದರೂ ಕೂಡ ಸಿದ್ದಯ್ಯ ಎಂಬುವರಿಗೆ ಹಿಂಸೆ ಮಾಡಿದ್ದಾರೆ, ಅವರಿಗೆ

ಮೂಗು, ಕೈ, ಕಾಲುಗಳಿಗೆ ಮಚ್ಚಿನಿಂದ ಹೊಡೆದಿದ್ದಾರೆ. 144ನೇ ಪ್ರತಿಬಂಧಕಾಜ್ಞೆ ಇದ್ದರೂ ಸಹ ಅಲ್ಲಿ ಈ ಘಟನೆಗಳು ನಡೆದಿವೆ. ಹಾಗಾದರೆ 144ನೇ ಪ್ರತಿಬಂಧಕಾಜ್ಞೆಗೆ ಈ ಸರ್ಕಾರದಲ್ಲಿ ಬಲೆ ಇಲ್ಲವೇ. ಆ ಸಂದರ್ಭದಲ್ಲಿ ಹರಿಜನರಿಗೆ ಯಾವ ರಕ್ಷಣೆಯೂ ಕೂಡ ಸಿಕ್ಕಿಲ್ಲ. ಆದುದರಿಂದ ತಾವು ದಯಮಾಡಿ ಈ ಬಗ್ಗೆ ಸತ್ಯವನ್ನು ಮರೆಮಾಚತಕ್ಕ ಹೇಳಿಕೆಯನ್ನು ಕೊಡಬೇಡಿ, ಅಲ್ಲಿ ಸಾಮಾಜಿಕ ಬಹಿಷ್ಕಾರ ನಡೆದಿದೆ. ತಾವೂ ಹೇಳಿಕೆ ಕೊಟ್ಟಿದೀರಿ. ಅಲ್ಲಿ ಸಣ್ಣ ಕೈಗಾರಿಕೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅಲ್ಲಿ ಯಾವುದೇ ಒಂದು ಕೆಲಸಕೊಡದೆ ಇರತಕ್ಕ ಪ್ರಯತ್ನ ನಡೆದಿದೆ, ಯಾವ ಕೆಲಸ ಕೂಡ ಸಿಕ್ಕಲಿಲ್ಲ ಎನ್ನತಕ್ಕ ಪ್ರಸಂಗ ನಡೆದಿದೆ. ಈ 90 ದಿವಸಗಳ ಅವಧಿಯಲ್ಲಿ ತಾವು ಹೋಗಿ ಸಮಾಧಾನ ಮಾಡಬೇಕಾಗಿತ್ತು. ಆಗ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿತ್ತು. ಹರಿಜನರ ಮೇಲೆ ದೌರ್ಜನ್ಯ ನಡೆಯುತ್ತಿದ್ದಾಗಲೂ ಕೂಡ ಪ್ರಾರಂಭದಲ್ಲಿ ತಾವು ಹೋಗಲಿಲ್ಲ. ತಾವು ಎಲ್ಲಾ ಆದ ನಂತರ ಹೋದಿರಿ. ಅಲ್ಲಿ ಯವರೆಗೆ ಪ್ರಕ್ಷುಬ್ಧ ವಾತಾವರಣ ಈ 90 ದಿವಸಗಳಲ್ಲಿ ಇತ್ತು. ಅಲ್ಲಿಯವರೆಗೆ ಹರಿಜನರು ನರಕಯಾತನೆಯನ್ನು ಅನುಭವಿಸುತ್ತಾ ಇದ್ದರು. 12 ಜನ ಹಿಂದುಗಳ ಮೇಲೆ ಮತ್ತು 12 ಜನ ಹರಿಜನರ ಮೇಲೆ ಕೇಸ್ ಹಾಕಲಾಗಿದೆಯೆಂದು ಹೇಳಿದ್ದೀರಿ. ಇದರಿಂದ ಕ್ಲಾಷ್ ಕಡಿಮೆಯಾಗುವುದಿಲ್ಲ. ಹರಿಜನರನ್ನಾಗಲಿ, ಉಳಿದವರನ್ನಾಗಲಿ ಅವರನ್ನು ಗುರುತಿಸಿ ಅವರ ಮೇಲೆ ಕೇಸುಗಳನ್ನು ಹಾಕಬೇಕು.

ನಾನು ಕೇಳಿದ್ದು ಏನೆಂದರೆ ಮೊದಲೇ ಅವರುಗಳ ಮೇಲೆ ಏತಕ್ಕೆ ಕೇಸ್ ಹಾಕಲಿಲ್ಲ ? ಸರ್ಕಾರ 90 ದಿವಸಗಳ ಕಾಲ ಏತಕ್ಕೆ ಕಣ್ಮುಚ್ಚಿಕೊಂಡು ಕುಳಿತುಕೊಂಡಿತ್ತು ? ಮತ್ತೆ ಅಲ್ಲಿ ಬಾಯ್‌ಕಾಟ್ ಆಗಿಲ್ಲವೆಂದು ಹೇಳುತ್ತಿದ್ದೀರಿ, ದಯಮಾಡಿ ಈ ರೀತಿಯ ಉತ್ತರವನ್ನು ಕೊಟ್ಟು ಈ ಸಭೆಯನ್ನು ತಪ್ಪುದಾರಿಗೆ ಎಳೆಯಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಅಧ್ಯಕ್ಷರೇ, ಸರ್ಕಾರ ಯಾವುದನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ಅಲ್ಲಿ ಸಾಮಾಜಿಕ ಬಹಿಷ್ಕಾರವನ್ನು ಹಾಕಿತ್ತು ಎಂದು ಹೇಳಿ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. ನಿಜವಾಗಿಯೂ ಅಲ್ಲಿ ಸಾಮಾಜಿಕ ಬಹಿಷ್ಕಾರ ಹಾಕಿರಲಿಲ್ಲ. ಅಲ್ಲಿಯ ಹರಿಜನರು ನಮಗೊಂದು ನ್ಯಾಯ ಬೆಲೆ ಅಂಗಡಿ ಬೇಕು ಎಂದು ಡೆಪ್ಯುಟಿ ಕಮೀಷನರವರನ್ನು ಕೇಳಿಕೊಂಡಿದ್ದರು. ಅದರಂತೆ ಅಲ್ಲಿ ಅಂಗಡಿಯನ್ನು ತೆಗೆದಿದ್ದೇವೆಯೇ ವಿನಹಾ, ಬೇರೆ ಇನ್ನು ಯಾವುದೇ ಕಾರಣಕ್ಕೂ ಅಲ್ಲ. ಯಾವುದೇ ಸರ್ಕಾರ ಅಧಿಕಾರದಲ್ಲಿ ಇರಲಿ, ಹರಿಜನ ಸಮಾಜದವರನ್ನು ಮತ್ತು ಬೇರೆ ಸಮಾಜದವರನ್ನು ಛಿದ್ರ ಛಿದ್ರ ಮಾಡಬೇಕು ಎನ್ನುವ ಆಸೆ ಇರವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸಚಿವರು ನನ್ನ ಪ್ರಶ್ನೆಗೆ ಸಮರ್ಪಕವಾಗಿ ಉತ್ತರಕೊಡುತ್ತಿಲ್ಲ. 144ನೇ ಸೆಕ್ಷನ್ ಅಲ್ಲಿ ಯಾವಾಗ ಹಾಕಿದ್ದೀರಿ ? ಮತ್ತು ಏತಕ್ಕೆ ಹಾಕಿದಿರಿ, ಅದನ್ನು ಯಾವಾಗ ಲಿಫ್ಟ್ ಮಾಡಿದಿರಿ ಎಂಬುದನ್ನು ಹೇಳಲಿಲ್ಲ. ಮತ್ತೆ ಶಾಂತಿ ಸಮಿತಿ ನೀವು ಅಲ್ಲಿಗೆ ಹೋಗುವುದಕ್ಕೆ ಮುಂಚಿತವಾಗಿಯೇ ರಚನೆಯಾಗಿತ್ತೇ ಅಥವಾ ಆಮೇಲೆ ರಚನೆಯಾಯಿತೇ ? ಆ ಶಾಂತಿ ಸಮಿತಿಯಲ್ಲಿ ಸ್ಥಳೀಯ ಶಾಸಕರು ಇದ್ದಾರೆಯೆ, ಅಥವಾ ಇಲ್ಲವೇ ? ಇಲ್ಲದಿದ್ದರೆ ಅವರನ್ನು ಅದರಲ್ಲಿ ಏತಕ್ಕೆ ಇನ್ವಾಲ್ವ್ ಮಾಡಲಿಲ್ಲ ? 23ನೇ ತಾರೀಖು ಏನು ಘಟನೆ ನಡೆಯಿತು ಅವತ್ತಿನ ದಿವಸ ಎಷ್ಟು ಜನರನ್ನು ಅರೆಸ್ಟ್ ಮಾಡಿದಿರಿ ? ಅರೆಸ್ಟ್ ಮಾಡದಿದ್ದರೆ ಅದಕ್ಕೆ ಕಾರಣವೇನು ? ಅವತ್ತೇ ನೀವು ಅರೆಸ್ಟ್ ಮಾಡಿದ್ದರೆ ಈ ರೀತಿಯಾದ ಘಟನೆಯೇ ನಡೆಯುತ್ತಿರಲಿಲ್ಲ, ಈ ರೀತಿಯ ಗೊಂದಲವನ್ನು ಸರ್ಕಾರ ಉಂಟುಮಾಡಿದ್ದು ಎಂದು ನಾನು ಹೇಳುತ್ತಿಲ್ಲ. ಆದರೆ ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಇದ್ದುದರಿಂದ ಆ ಹರಿಜನರು ನರಕಯಾತನೆಯನ್ನು ಅನುಭವಿಬೇಕಾದಂಥ ಪರಿಸ್ಥಿತಿಯುಂಟಾಯಿತು, ಆದುದರಿಂದ ಇದಕ್ಕೆಲ್ಲಾ ಸಮಂಜಸವಾದ ಉತ್ತರವನ್ನು ಮಾನ್ಯ ಮಂತ್ರಿಗಳವರು ನೀಡಬೇಕು.

ಶ್ರೀ ಜೆ. ಡಿ. ಸೋಮಪ್ಪ. ಇಂಥಾ ಪ್ರಾಮುಖ್ಯವಾದ ವಿಷಯದ ಬಗ್ಗೆ ಸ್ಥಳೀಯ ಶಾಸಕನಾದ ನನಗೆ ಮಾತನಾಡಲು ಅವಕಾಶ ಕೊಡುವುದಿಲ್ಲವಂದರೆ ಅರ್ಥವೇನು ಸ್ವಾಮಿ ?

ಅಧ್ಯಕ್ಷರು.—ನೀವು ಅವಕಾಶ ತೆಗೆದುಕೊಳ್ಳಬೇಕು, ನಿಮಗೆ ಅವಕಾಶವನ್ನು ಪಡೆದುಕೊಳ್ಳುವುದಕ್ಕೆ ಮನಸ್ಸು ಇದ್ದಿದ್ದರೆ ಸಹಿ ಹಾಕಿ ಕಳುಹಿಸಬೇಕಾಗಿತ್ತು.

ಶ್ರೀ ಜೆ. ಡಿ. ಸೋಮಪ್ಪ.—ನಾನು ಮೊದಲೇ ಇದರ ಬಗ್ಗೆ ನೋಟೀಸ್ ಕಳುಹಿಸಿಕೊಟ್ಟಿದ್ದೇನೆ. ಆದುದರಿಂದ ಈಗಲಾದರೂ ಒಂದೆರಡು ನಿಮಿಷಗಳ ಕಾಲಾವಕಾಶ ಮಾಡಿಕೊಡಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಸರ್ಕಾರ ಜವಾಬ್ದಾರಿಯುತವಾಗಿ, ಸರಿಯಾಗಿ ಕೆಲಸ ಮಾಡಲಿಲ್ಲ ಎನ್ನತಕ್ಕ ಅಪಾದನೆಯನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೊರಿಸಿದ್ದಾರೆ. ಆದರೆ ಅಲ್ಲಿ ಯಾವ ರೀತಿಯಾಗಿ ಕಾನೂನಿನ ವ್ಯವಸ್ಥೆ ಮಾಡಬೇಕೋ ಅದನ್ನು ಮಾಡಿ ಅಲ್ಲಿವತಕ್ಕ ಜನಗಳಿಗಾಗಲೀ, ಹರಿಜನರಿಗಾಗಲೀ ಇಲ್ಲವೇ ಹರಿಜನರೇತರರಿಗಾಗಲೀ ಯಾವ ರೀತಿಯ ರಕ್ಷಣೆಯನ್ನು ಕೊಡಬೇಕೋ ಅದನ್ನು ಸರ್ಕಾರ ಕೊಟ್ಟಿದೆ.

ಅಧ್ಯಕ್ಷರು.—144ನೇ ಸೆಕ್ಷನ್ ಯಾವಾಗ ಜಾರಿಗೆ ತಂದಿರಿ ಮತ್ತು ಅದನ್ನು ಯಾವಾಗ ಹಿಂದಕ್ಕೆ

ತೆಗೆದುಕೊಂಡಿರಿ ಎಂದು ಪ್ರಶ್ನೆ ಕೇಳಿದ್ದಾರೆ ಅದಕ್ಕೆ ಮಾಹಿತಿ ಇದ್ದರೆ ಕೊಡಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಅಧ್ಯಕ್ಷರೇ, ಆ ಮಾಹಿತಿಯನ್ನು ಆಮೇಲೆ ಅವರಿಗೆ ತರಿಸಿ ಕೊಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ನನ್ನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಡದೇ ಇರುವುದರಿಂದ ದಯವಿಟ್ಟು ಇದನ್ನು ವಿತ್ ಹೆಲ್ಡ್ ಮಾಡಬೇಕು. ಅವರು ಸರಿಯಾದ ಮಾಹಿತಿಯನ್ನು ತರಿಸಿಕೊಂಡು ಬೇಕಾದರೆ ನಾಳೆ ದಿವಸ ಉತ್ತರ ಕೊಡಲಿ.

ಅಧ್ಯಕ್ಷರು.—ಕಾಲಿಂಗ್ ಅಟೆನ್ಷನ್‌ನನ್ನು ಹೇಗೆ ವಿತ್ ಹೆಲ್ಡ್ ಮಾಡುವುದು ? ಮಾನ್ಯ ಸಚಿವರು ಹೊಸಬರಿದ್ದಾರೆ ಅವರಿಗೆ ಸ್ವಲ್ಪ ಕಾಲಾವಕಾಶ ಕೊಡಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ಯಾವಾಗ ಸೆಕ್ಷನ್ 144 ಜಾರಿ ಮಾಡಿದಿರಿ ಮತ್ತು ಅದನ್ನು ಯಾವಾಗ ಲಿಫ್ಟ್ ಮಾಡಿದಿರಿ ಎನ್ನುವ ಬಗ್ಗೆ ಈಗ ನನ್ನ ಹತ್ತಿರ ಮಾಹಿತಿ ಇಲ್ಲ, ಅದನ್ನು ನಾಳೆ ತರಿಸಿ ಅವರಿಗೆ ಒದಗಿಸಿ ಕೊಡುತ್ತೇನೆ.

ಅಧ್ಯಕ್ಷರು.—ಇನ್ನೊಂದು ಶಾಂತಿ ಸಮಿತಿಯ ಬಗ್ಗೆ ಕೇಳಿದ್ದಾರೆ ಅದರ ಬಗ್ಗೆ ಹೇಳಿ.

ಶ್ರೀ ಜಿಗಿ ಜಿನಗಿ ರಮೇಶ ಚಂದಪ್ಪ.—ನಾನು ಅಲ್ಲಿಗೆ ಭೇಟಿ ಮಾಡುವುದಕ್ಕಿಂತ ಮುಂಚಿತವಾಗಿ ಸ್ಥಳೀಯ ಶಾಸಕರಿಗೆ ಫೋನ್ ಮುಖಾಂತರವಾಗಿ ತಿಳಿಸಿದ್ದೆ, ಆದರೂ ಸಹ ಅವರು ಬರಲಿಲ್ಲ. ಆದರೂ ನಾನು ನನ್ನ ಕರ್ತವ್ಯವನ್ನು ಸರ್ಕಾರದ ಪರವಾಗಿ ಮಾಡಿದ್ದೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—23ನೇ ತಾರೀಖು ಈ ಘಟನೆ ನಡೆದಾದ ಮೇಲೆ ಎಷ್ಟು ಜನರನ್ನು ಅರೆಸ್ಟ್ ಮಾಡಿದಿರಿ ? ಆಮೇಲೆ ಶಾಂತಿ ಸಮಿತಿ ರಚನೆಯಾದ ಮೇಲೆ ಶಾಂತಿ ಸಮಿತಿಯು ಏತಕ್ಕೆ ವಿಸರ್ಜನೆಯಾಯಿತು ? ಆ ಸಮಿತಿಯ ಛೇರ್ಮನ್‌ರವರು ಏತಕ್ಕೆ ರಾಜೀನಾಮೆ ಕೊಟ್ಟರು ? ಎನ್ನುವ ಬಗ್ಗೆ ವಿವರಣೆ ಕೊಡಲಿಲ್ಲ.

ಅಧ್ಯಕ್ಷರು.—ಇದರ ಬಗ್ಗೆ ಎಲ್ಲಾ ಮಾಹಿತಿಯನ್ನು ಅವರಿಗೆ ಒದಗಿಸಿ.

2. ವಿಷಯ :ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್.—ಕಬ್ಬನ್ನು ಸರಬರಾಜು ಮಾಡಿದ್ದಕ್ಕೆ ಸಕ್ಕರೆ ಕಾರ್ಖಾನೆಗಳಿಂದ ಹಣ ಪಾವತಿ ಮಾಡಲು ಹಾಗೂ ಕಬ್ಬಿಗೆ ಸೂಕ್ತ ಬೆಲೆ ನಿಗದಿ ಪಡಿಸಲು ಮತ್ತು ಸಕ್ಕರೆ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡಲು ಒತ್ತಾಯಿಸಿ ರೈತ ಸಂಘದ ಪ್ರತಿನಿಧಿಗಳು ಧರಣಿ ಹೂಡಿದ ವಿಚಾರವನ್ನು ಕೈಗಾರಿಕಾ ಮಂತ್ರಿಗಳವರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮತ್ತು ವಾಣಿಜ್ಯ ಮಂತ್ರಿಗಳು).—ಸಭಾಧ್ಯಕ್ಷರೇ, ಹೊಸ ಸರ್ಕಾರ ಅಧಿಕಾರ ವಹಿಸಿದ ಮೇಲೆ ರೈತರ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ರೈತ ಮುಖಂಡರ ಜೊತೆಗೆ 5 ಸಲ ಚರ್ಚೆ ಮಾಡಿದ್ದೇವೆ. ಅವರ ಕೆಲವು ಸಮಸ್ಯೆಗಳಿಗೆ ಪರಿಹಾರ ಕೂಡಾ ಒದಗಿಸಿ ಕೊಟ್ಟಿದ್ದೇವೆ. ರಾಜ್ಯ ಸರ್ಕಾರ, ತನ್ನ ಅಧಿಕಾರದ ಇತಿಮಿತಿಯಲ್ಲಿ ರೈತರ ಇತರ ಸಮಸ್ಯೆಗಳಿಗೂ ಸೂಕ್ತ ಪರಿಹಾರ ಒದಗಿಸಲು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತಾ ಬಂದಿದೆ. ಅಲ್ಲದೇ ಮುಖ್ಯ ಮಂತ್ರಿಗಳು ಮತ್ತು ನಾನು ಈ ಸಮಸ್ಯೆಗಳ ಬಗ್ಗೆ ಕೇಂದ್ರ ಮಂತ್ರಿಗಳೊಡನೆ ಚರ್ಚೆ ಮಾಡಿ ರೈತರಿಗೆ ಅನುಕೂಲವಾದ ನಿರ್ಣಯಗಳನ್ನು ತೆಗೆದುಕೊಳ್ಳಲು ಒತ್ತಾಯಿಸಿದ್ದೇವೆ.

ಕಬ್ಬು ಬೆಳೆಗಾರರ ಸಮಸ್ಯೆಗಳನ್ನು ಕೂಡಾ ರೈತನಾಯಕರ ಜೊತೆಗೆ ಅನೇಕ ಸಲ ಮಾತುಕತೆ ನಡೆಸಿದ್ದೇನೆ.

ಕಬ್ಬಿನ ಬೆಲೆ ನಿಗದಿ ಮಾಡುವ ಅಧಿಕಾರ ಕೇಂದ್ರ ಸರ್ಕಾರಕ್ಕೆ ಮಾತ್ರ ಇರುತ್ತದೆ. ಆದರೆ, ಕಾಲ ಕಾಲಕ್ಕೆ ರಾಜ್ಯ ಸರ್ಕಾರಗಳು ರೈತರ ಹಿತಾಸಕ್ತಿ ರಕ್ಷಿಸುವುದಕ್ಕಾಗಿ ಕೆಲವೊಂದು ಹೆಚ್ಚಿನ ರಿಯಾಯಿತಿಗಳನ್ನು ಕೊಡುತ್ತಾ ಬಂದಿವೆ. ಕೇಂದ್ರ ಸರ್ಕಾರವು 82–83 (ಅಕ್ಟೋಬರ್‌ನಿಂದ ಸೆಪ್ಟೆಂಬರ್) ಕಬ್ಬಿನ ಕನಿಷ್ಟ ಬೆಲೆಯನ್ನು ಒಂದು ಟನ್‌ಗೆ 130 ರೂ. 8.5 ಇಳುವರಿಗೆ ನಿರ್ಧರಿಸಿತ್ತು. ಕೇಂದ್ರ ಸರ್ಕಾರವು 83–84 ವರ್ಷದ ಬಗ್ಗೆ ಇನ್ನೂ ಬೆಲೆ ನಿಗದಿ ಮಾಡಿಲ್ಲ. ಕರ್ನಾಟಕದಲ್ಲಿ ಸಕ್ಕರೆ ಅರೆಯುವ ಕೆಲಸವು ಕೆಲವು ಕಾರ್ಖಾನೆಗಳಲ್ಲಿ ಜೂನ್–ಜುಲೈನಲ್ಲಿ ಪ್ರಾರಂಭವಾಗುತ್ತದೆ. ಯಾವುದೇ ವರ್ಷದ ಕಬ್ಬನ್ನು ಅರೆಯುವ ಮೊದಲು ಕಬ್ಬಿನ ಬೆಲೆಯನ್ನು ನಿಗದಿ ಮಾಡುವ ಪರಿಹಾರ ಅಥವಾ ನಿಯಮ ರಾಜ್ಯದಲ್ಲಿ ಇರುವುದಿಲ್ಲ. ಆದಾಗ್ಯೂ, ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವುದನ್ನು ಪ್ರಾರಂಭಿಸುವ ಮೊದಲು ರೈತ ಮುಖಂಡರ ಜೊತೆ ಚರ್ಚಿಸಿ ಎಷ್ಟು ಮುಂಗಡ ಹಣ ಕೊಡಬೇಕು ಎನ್ನುವ ಬಗ್ಗೆ ಅನೌಪಚಾರಿಕವಾಗಿ ನಿರ್ಣಯ ತೆಗೆದುಕೊಳ್ಳುವ ರೂಢಿ ನಡೆದು ಬಂದಿದೆ. ರಾಜ್ಯದಲ್ಲಿಯ ಉಳಿದ ಸಕ್ಕರೆ ಕಾರ್ಖಾನೆಯವರು ರೈತರ ಪ್ರತಿನಿಧಿಗಳ ಜೊತೆ ಅನೌಪಚಾರಿಕವಾಗಿ ಒಪ್ಪಂದ ಮಾಡುತ್ತಾ ಬಂದಿರುತ್ತಾರೆ. ಈ ಸಲ ರೈತ ಪ್ರತಿನಿಧಿಗಳೊಡನೆ ಚರ್ಚಿಸಿದ ನಂತರ ಸರ್ಕಾರವು ಒಂದು ಟನ್ ಕಬ್ಬಿಗೆ 8.5 ಇಳುವರಿಗೆ 180 ರೂ. ಮುಂಗಡ ಹಣ ಕೊಡುವ ಬಗ್ಗೆ ನಿರ್ಣಯ ತೆಗೆದುಕೊಂಡಿರುತ್ತದೆ. ಮತ್ತು